CC No.2335/2022
CW-1 PW-1

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 2335/2022**

**ಹೆಸರು** :- **ಶ್ರೀರಂಜನಿ**

**ಗಂಡನ ಹೆಸರು** :- **ಪ್ರವೀಣ ಕುಮಾರ**

**ವಯಸ್ಸು** :- **41 ವರ್ಷ**

**ಉದ್ಯೋಗ** :- **ಪುರಸಭೆ ಉಪಾಧ್ಯಕ್ಷರು**

**ಸ್ಥಳ** :- **ಸೊರಬ**

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-2 ನನ್ನ ಗಂಡ. ಚಾಸಾ-3 ರವರು ಚಾಸಾ-2 ರವರ ಸಹೋದರ. ದಿಃ14.02.2022 ರಂದು ರಾತ್ರಿ ಸುಮಾರು 9.00 ರ ಸಮಯದಲ್ಲಿ ನಮಗೆ ಸಂಬಂಧಿಸಿದ ಕಾರ್ ಶೆಡ್ ನಲ್ಲಿ ಚಾಸಾ-2 ರವರು ಕಾರನ್ನು ನಿಲ್ಲಿಸಿದ್ದು, ಚಾಸಾ-2 ರವರಿಗೆ ಅನಾರೋಗ್ಯ ಇರುವುದರಿಂದ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಕಾರ್ ಶೆಡ್ ನಿಂದ ಕಾರನ್ನು ತೆಗೆಯಲು ನಾನು ಮತ್ತು ಚಾಸಾ-2 ರವರು ಹೋಗಿದ್ದಾಗ 1 ರಿಂದ 5 ನೇ ಆರೋಪಿತರು ಕಾರ್ ಶೆಡ್ ಹತ್ತಿರ ಬಂದು ಏಕಾಏಕಿ ಗಲಾಟೆ ಮಾಡಿ 1 ರಿಂದ 3 ನೇ ಆರೋಪಿತರು ನನ್ನ ಕೊರಳಿಗೆ ಕೈ ಹಾಕಿರುತ್ತಾರೆ. 4 ಮತ್ತು 5 ನೇ ಆರೋಪಿತರು ಚಾಸಾ-2 ರವರು ಹಿಡಿದುಕೊಂಡಿದ್ದು, ಆಗ ನಾನು ಕೆಳಗೆ ಬಿದ್ದಿರುತ್ತೇನೆ.

1 ಮತ್ತು 3 ನೇ ಆರೋಪಿತರು ನನಗೆ ಕಾಲಿನಿಂದ ಒದ್ದಿರುತ್ತಾರೆ. ಆಗ ನಾನು ಧರಿಸಿದ್ದ ಬಟ್ಟೆಗಳು ಅಸ್ತವ್ಯಸ್ಥವಾಗಿರುತ್ತವೆ. ಸದರಿ ಘಟನೆಯಿಂದ ನನಗೆ ಮಾನಕ್ಕೆ ಕುಂದುಂಟುವಾಗುವಂತೆ ಆಗಿರುತ್ತದೆ. ಆರೋಪಿತರು ಎಲ್ಲರೂ ನನಗೆ ಸೂಳೇ ಮುಂಡೆ ಬೇವರ್ಸಿ ಮುಂಡೆ ಎಂದು ಬೈದಿರುತ್ತಾರೆ. 2 ನೇ ಆರೋಪಿ ನನ್ನ ಜುಟ್ಟು ಹಿಡಿದುಕೊಂಡು ಎಳೆದಾಡಿರುತ್ತಾರೆ. 3 ನೇ ಆರೋಪಿಯು ನನ್ನ ಕೊರಳಿನಲ್ಲಿದ್ದ ಚೈನ್ ನ್ನು ಹಿಡಿದು ಎಳೆದಾಡಿರುತ್ತಾರೆ ಅದರಿಂದ ಅದು ತುಂಡಾಗಿರುತ್ತದೆ. ಆಗ ಚಾಸಾ–4 ಮತ್ತು 5 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ಆರೋಪಿತರು ಎಲ್ಲರೂ ಜೀವ ಬೆದರಿಕೆ ಹಾಕಿರುತ್ತಾರೆ. ನಾನು ಅದೇ ದಿನ ಸೊರಬ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿರುತ್ತೇನೆ. ನಾನು ಸೊರಬ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾದಾಗ ಸೊರಬ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು.

ದಿಃ 22.03.2022 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು, ಆಗ ಚಾಸಾ–6 ಮತ್ತು 7 ರವರು ಇದ್ದು, ನಾನು ತೋರಿಸಿದ ಘಟನಾ ಸ್ಥಳದಲ್ಲಿ ಬೆಳಗ್ಗೆ 10.30 ರಿಂದ 11.00 ಗಂಟೆ ಸ್ಥಳಕ್ಕೆ ಬಂದು ಅಲ್ಲಿಂದ ಒಂದು ತಾಸು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಯು ಘಟನಾ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–2 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಆ ದಿನ ಹಲ್ಲೆ ಮಾಡಿದ ಆರೋಪಿತರಾದ 1, 2, 4 ಮತ್ತು 5 ರವರನ್ನು ನೋಡಿ ಗುರುತಿಸಿದ್ದು, 3 ನೇ ಆರೋಪಿಯು ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಾನು ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ದೂರಿನಲ್ಲಿ ಬಂಗಾರದ ಸರವನ್ನು 3 ನೇ ಆರೋಪಿಯು ಕಿತ್ತುಕೊಂಡಿರುತ್ತಾನೆ ಎಂದು ಬರೆಸಿದ್ದು, ನಂತರ ಅದು ಕಾರ್ ಶೆಡ್ ನಲ್ಲಿ ದೊರಕಿರುತ್ತದೆ ಎಂದು ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ.

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗೆ ಸಮಯ ಕೋರಿದ್ದು, ರೂ.100/- ಖರ್ಚಿನೊಂದಿಗೆ ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**